ವಿಚಾರಿಸೋಣಾಂತ ಬಂದೆವು'

ಕಾಶಮ್ಮ ಕೈಗಳೆರಡನ್ನು ಜೋಡಿಸಿ ಕೃತಜ್ಞತೆಯನ್ನು ಸೂಚಿಸಿದರು.

'ನಿಮ್ಮ ಉಪಕಾರ ಮರೆಯೋದಿಲ್ಲ. ನನ್ ಮಗಳ ಕಣ್ಮರೆಯ ಹಿಂದೆ ಈ ಹುಡುಗಿನೂ ಹಾಗೆ ಆದ್ರೆ... ದೇವ್ರೇ...' ಸಂಕಟದ ದನಿಯಲ್ಲಿ ಮಿಸುಕಾಡಿದರು.

'ನೀವು ಅನಗತ್ಯ ಹೆದರ್ತಿದ್ದೀರಿ. ಮೇನಕಾಗೆ ಏನೂ ಆಗಿಲ್ಲ. ನಿಮ್ಮ ಮಗಳಿಗೂ ಏನೂ ಆಗಿರೋದಿಲ್ಲ. ನೀವು ಭಯ ಪಡೋ ಅವಶ್ಯಕತೆಯಿಲ್ಲ' ಇನ್ಸ್‌ಪೆಕ್ಟರ್ ರಾಜಧಾನಿ ಸಮಾಧಾನದ ಮಾತುಗಳನ್ನು ಹೇಳಿದರೂ ಆಕೆಯ ಮನಸ್ಸು ಭಯ ವಿಹ್ವಲವಾಗಿತ್ತು.

'ನಂಗೆ ಭಯ ಅದಲ್ಲ. ನನ್ನ ಮಗಳು ಕಾಣೆಯಾಗೋದಿಕ್ಕೆ ಒಂದು ರೀತಿಯಲ್ಲಿ ಮೇನಕಾನೇ ಕಾರಣ' ತಗ್ಗಿದ ದನಿಯಲ್ಲಿ ಉಸಿರಿನ ಏರಿಳಿತದೊಂದಿಗೆ ಹೇಳಿದರು.

'ಅಂದ್ರೆ?'ಕುತೂಹಲ, ಆಸಕ್ತಿ ಬೆರೆತ ದನಿಯಲ್ಲಿ ಇನ್ಸ್‌ಪೆಕ್ಟರ್ ಅವರ ಮಾತಿಗೆ ಮುಖ ಮುಂದಕ್ಕೆ ತಂದು ಕೇಳಿದ.

'ಅಂದ್ರೆ, ಈಗ ಮೇನಕಾನೂ ಕಾಣೆಯಾದ್ರೆ ಅವಳಿಗೆ ಗೊತ್ತಿರೋ ರಹಸ್ಯ ಹಾಗೆ ಉಳಿದು ಬಿಡುತ್ತೆ. ಲಹರಿ ನಮ್ಮಿಂದ ದೂರವಾಗಿ ಬಿಡ್ತಾಳೆ. ಅದ್ಕೆ ನಂಗೆ ಅನುಮಾನ ಆ ಅನಾಮಧೇಯ ಪತ್ರ ಬರೆದ ವ್ಯಕ್ತಿಯ ಬಗ್ಗೆ ಮೇನಕಾಗೆ ಗೊತ್ತಿದೆ. ಅವಳು ನನ್ನ ಕೈಯಿಂದ ಪತ್ರವನ್ನು ಕಸಿದುಕೊಂಡ್ಲು. ನಾನು ಅದನ್ನು ನಿಮಗೆ ಕೊಡೋಣಾಂತ ಫೋನ್ ಮಾಡುವವಳಿದ್ದೆ. ಆದ್ರೆ ನಿಮಗೆ ಆ ಪತ್ರವನ್ನು ಕೊಡೋ ಅವಕಾಶ ಸಿಗ್ಲಿಲ್ಲ' ಮಾತು ಮುಗಿಸಿ ಕಣ್ಣೀರು ಒರೆಸಿಕೊಂಡಿತು ನೊಂದ ಮನ.

'ಆ ಪತ್ರದ ಬಗ್ಗೆ ನೀವು ಚಿಂತಿಸ್ಬೇಡಿ. ಅದು ನಮ್ಮ ಬಳಿ ಜೋಪಾನವಾಗಿದೆ. ಆದ್ರೆ ಆ ಪತ್ರ ನಿಮಗೆಲ್ಲಿಂದ ಸಿಗ್ತು?'

'ಸಾರ್, ಅದು... ಇಲ್ಲಿತ್ತು' ಕಾಶಮ್ಮ ಎದ್ದು ಬಾಗಿಲಿನ ಸಂದಿಯ ಸರಳುಗಳನ್ನು ತೋರಿಸಿ ಹೇಳಿದರು. ಇನ್ಸ್‌ಪೆಕ್ಟರ್ ರಾಜಧಾನಿ ಅವರ ಹಿಂದೆಯೇ ನಡೆದ ಜೊತೆಗೆ ಪಿಸಿ ಸಾರಂಗ ಕೂಡ ಅವರನ್ನು ಹಿಂಬಾಲಿಸಿದ. ಇಬ್ಬರೂ ಕೂಲಂಕಷವಾಗಿ ಆ ಸ್ಥಳವನ್ನು ಪರಿಶೀಲಿಸಿದರು. ರಹಸ್ಯವೇನು ಕಾಣಲಿಲ್ಲ!

'ಆ ಸಮಯದಲ್ಲಿ ಹೊರಗಿನವರು ಯಾರಾದರೂ ಇಲ್ಲಿಗೆ ಬಂದಿದ್ದರೆ?' ಇನ್ಸ್‌ಪೆಕ್ಟರ್‌ನ ಪ್ರಶ್ನೆಗೆ ಆಕೆ ನಕಾರಾತ್ಮಕವಾಗಿ ತಲೆಯಲುಗಿಸಿದರು.

'ಇಲ್ಲ ಇನ್ಸ್‌ಪೆಕ್ಟರ್, ನಂಗೆ ಗೊತ್ತಿದ್ದ ಹಾಗೆ ಯಾರೂ ಬಂದಿಲ್ಲ'

ಅಲ್ಲಿಯೇ ನಿಂತಿದ್ದ ಕೆಲಸದಾಳು ಓಡಿ ಬಂದವನು ಇನ್ಸ್‌ಪೆಕ್ಟರ್ ಎದುರು ನಿಂತು ತಲೆ ಕೆರೆದುಕೊಂಡ. ಇನ್ಸ್‌ಪೆಕ್ಟರ್ ಪರೀಕ್ಷಾ ದೃಷ್ಟಿಯಿಂದ ಅವನನ್ನು ನೋಡಿದ.

'ಸಾರ್, ಚಿಕ್ಕಮ್ಮೋರು ಮಾಡಿ ಮೇಲಿರೋರು. ಅವರಿಗೆ ಯಿಸ್ಯ ಗೊತ್ತಿಲ್ಲ. ಇವತ್ತು ಒಬ್ಬಾತ ಮನೆಗೆ ಬಂದು ಸಣ್ಣಮ್ಮೋರ ಯಿಚಾರಿಸ್ಕೊಂಡು ಹೋದ. ನಂಗನುಮಾನ ಆತನೆ ಈ ಕಾಗ್ದ ಬರ್ದಿರಬಹುದು'

ಎಲ್ಲರ ದೃಷ್ಟಿಯೂ ಅವನತ್ತ ಇತ್ತು. ಇನ್ಸ್‌ಪೆಕ್ಟರ್ ಆಲೋಚಿಸಿದ.ಬಂದಾತ ಯಾರಿರಬಹುದು?

* * *

ಫಾರ್ಮ್ ಹೌಸ್‌ನ ಬಿಗದ ಕೀಲಿಯನ್ನು ತಿರುವಿದ ಮೇನಕಾ ಒಳಗಿನ ವ್ಯವಸ್ಥೆಗಳನ್ನೊಮ್ಮೆ ಪರಿಶೀಲಿಸಿದಳು. ಕೆಲಸದಾಳು ಎಲ್ಲವನ್ನೂ ಅಚ್ಚುಕಟ್ಟಾಗಿ ಮಾಡಿ ಮುಗಿಸಿದ್ದಾನೆ. ಆತ ನಂಬಿಕೆಯ ಆಳು.

ಫಾರ್ಮ್ ಹೌಸ್‌ನಲ್ಲಿ ನಡೆಸುವ ಔತಣ ಕೂಟಕ್ಕೆ ಬೇರೆ ಯಾರಿಗೂ ಆಹ್ವಾನವಿಲ್ಲ. ಪ್ರಿಯಕರನಿಗೆ ನಡೆಯುವ ತನಿಯಾದ ಪಾರ್ಟಿ. ಆ ಯೋಜನೆ ಬೇರೆಯವರಿಗೆ ತಿಳಿಯುವ ಹಾಗಿಲ್ಲ. ಭುಜಂಗೇಶರಾಯರು ಮರಳಿ ಬರುವುದಕ್ಕೆ ಇನ್ನೂ ಐದಾರು ದಿನಗಳ ಅವಕಾಶವಿದೆ. ಕಾಶಮ್ಮನಿಗೆ ವಿಷಯ ತಿಳಿಯದು. ವಿಶೇಷವಾಗಿ ಆಹ್ವಾನಿತನಾದವನು ಕಿರಣ!

ಪ್ರೀತಿಯ ಕದಂಬ ಬಾಹುಗಳಲ್ಲಿ ಅವಳನ್ನು ಬಂಧಿಸಿದವನು. ನೆನೆದಾಗಲೆಲ್ಲಾ ಪಾರ್ಟಿಯನ್ನು ಸಜ್ಜುಗೊಳಿಸೊ ಖುಷಿ ಪಡುವ ಹುಡುಗಿಗೆ ಕಿರಣನ ಮನಸ್ಸು ಗೆಲ್ಲುವ ಧಾವಂತ! ಅರಿವಿಲ್ಲದ ಛಲ ಅವಳೆದುರು ಪುಟಿದೆದ್ದು ನಿಂತಿತ್ತು.

ಆದರೆ ಲಹರಿಯ ವಿಷಯದಲ್ಲಿ ಸಂಪೂರ್ಣ ನಿರಾಸಕ್ತೆ!

ಫಾರ್ಮ್ ಹೌಸ್‌ನ ಒಳಗೆ ಇಣುಕು ಹಾಕಿದಳು. ಎಲ್ಲವೂ ಸುಸೂತ್ರ. ಮನಸ್ಸು ತೃಪ್ತಿಯಿಂದ ಬೀಗಿತು. ಹೊರಗಡಿಯಿಟ್ಟಳು.

ಸೂರ್ಯ ಕಿರಣಗಳು ಪಶ್ಚಿಮದ ಕಡೆಯಿಂದ ಬಾನಿಗೆ ಚಿಮ್ಮಿದ್ದವು. ಮತ್ತೆ ಬಂಗಲೆಗೆ ಹೋಗಿ ಹಿಂದಕ್ಕೆ ಬರುವ ಮನಸ್ಸಾಗದೆ ಒಳಗೆ ಕೋಣೆಯಲ್ಲಿ ಕುಳಿತು ಕಿರಣನನ್ನು ನಿರೀಕ್ಷಿಸಿದಳು. ಹೇಳಿದ ಸಮಯಕ್ಕೆ ಸರಿಯಾಗಿ ಬಂದು ಬಿಡುವ ಶಿಸ್ತಿನ ಸಿಪಾಯಿ ಅವನು.

ಗೋಡೆಗೆ ಮೊಳೆ ಹೊಡೆದು ತೂಗು ಹಾಕಿದ ಹಳೇಯ ಕಾಲದ ಗಡಿಯಾರ ಸಶಬ್ದವಾಗಿ ಏಳು ಹೊಡೆಯಿತು. ಹೊರಗೆ ಬೈಕ್‌ನ ಸದ್ದಿಗಾಗಿ ಕಿವಿ ನಿಮಿರಿಸಿ ಕುಳಿತಳು. ತಲೆಯಲ್ಲಿ ಕಿರಣನನ್ನು ಮೋಡಿಗೊಳಿಸುವ ಸಂಗತಿಗಳಿಗಾಗಿ ಯೋಚಿಸಿದವಳ ತುಟಿಯಂಚಿನಲ್ಲಿ ತೆಳು ಮುಗುಳ್ನಗು ಮಾರ್ದನಿಸಿತು. ಅರ್ಧಗಂಟೆಯಷ್ಟು ದೀರ್ಘ ಸಮಯದಲ್ಲಿ ಹೊರಗೇನೋ ಸದ್ದಾಗಿ ಬಾಗಿಲಿಗೆ ಆತು ನಿಂತಳು. ಕಿವಿ ನಿಮಿರಿತು! ಯಾರದೋ ಕಿರುಚಾಟ, ಹೋರಾಟದ ಸದ್ದು ಜೊತೆಗೆ ಸಣ್ಣಗೆ ನರಳಾಟ!

ಎದೆ ಡವಡವಿಸಿತು. ಭೀತಿಯಿಂದ ಕಣ್ಣುಗಳನ್ನು ಕತ್ತಲೆಗೆ ತೂರಿ ಬಿಟ್ಟು ನರಳಾಟದ ಸದ್ದಿನತ್ತ ನೋಡುವ ಯತ್ನ ನಡೆಸಿದಳು. ಧೈರ್ಯ ದೂರವಾಯಿತು. ಕಿರಣ ಈ ಹೊತ್ತು ಇರುತ್ತಿದ್ದರೆ ಚೆನ್ನಾಗಿತ್ತು. ಕೆಲಸದಾಳುಗಳನ್ನು ಕಳುಹಿಸಿ ಮೋಸ ಮಾಡಿದೆ. ತನ್ನ ಪ್ರಿಯಕರನಿಗೆ ಕೊಡುವ ಪಾರ್ಟಿಗೆ ಅವರ ಅವಶ್ಯಕತೆಯಿಲ್ಲವೆನ್ನುವುದಕ್ಕೆ ಹೊರಕ್ಕೆ ಕಳುಹಿಸಿದ್ದಳು. ಈಗ ಭಯ!

ಹೊರಗಿನ ದೀಪ ಬೆಳಗಿಸಿ ಹೊರಗೆ ಇಣುಕಿದಳು.

ಅಸ್ಪಷ್ಟ ಮನುಷ್ಯನಾಕೃತಿಗಳೆರಡು ಆಲೆಮನೆಯ ಕಡೆಯಿಂದ ಬರುತ್ತಿರುವುದು ಕಂಡಿತು. ಒಂದು ಕಿರಣ! ಇನ್ನೊಂದು ಅಸ್ಪಷ್ಟ! ಯಾರು?

ಯಾರಿಗೂ ಆಹ್ವಾನವಿಲ್ಲದ ರಹಸ್ಯ ಪಾರ್ಟಿ ಕಿರಣನಿಗೆ. ಆದರೆ ಕಿರಣ ಮಾಡಿದ್ದೇನು? ರಹಸ್ಯ ಪಾರ್ಟಿಗೆ ಮತ್ತೊಂದು ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದಾನೆ!

ಕಿರಣನ ಜೊತೆಗೆ ಲಹರಿ?

ಕಿರಣ ಪಾರ್ಟಿಯ ದಿನ ತನಗೆ ರಹಸ್ಯವನ್ನು ತೋರಿಸುವುದಾಗಿ ಹೇಳಿದ್ದ. ಅವನು ತೋರಿಸುವ ರಹಸ್ಯ ಲಹರಿ! ಮೇನಕಾ ಕಾಲು ಜಾಡಿಸಿ ಹೊರಗಿನ ದೀಪ ಆರಿಸಿ ಕೋಣೆ ಸೇರಿಕೊಂಡಳು. ತನಗೆ ಹೊಸದೊಂದು ಮಾಹಿತಿಯನ್ನು ತಿಳಿಸುತ್ತೇನೆಂದ ಕಿರಣ ಮೋಸ ಮಾಡಿದ್ದಾನೆ! ಹತಾಶೆಯಿಂದ ಮಂಚದ ಮೇಲೆ ಬೋರಲಾಗಿ ಮಲಗಿದಳು.

ಕಿರಣ ಬಂದು ತನ್ನನ್ನು ಕರೆಯುವನೆನ್ನುವ ನಿರೀಕ್ಷೆ ಅವಳದ್ದು. ಆದರೆ ವ್ಯಕ್ತಿಗಳು ಇನ್ನೂ ಫಾರ್ಮ್ ಹೌಸ್‌ಗೆ ಬಂದಿಲ್ಲ. ಹಾಗಾದರೆ ಅವರಿಬ್ಬರು ಯಾರು? ಆ ಕಿರುಚಾಟ, ಹೋರಾಟ, ನರಳಾಟಕ್ಕೆ ಸಂಬಂಧಪಟ್ಟ ವ್ಯಕ್ತಿಗಳೇ?

ಮೇನಕಾ ಎದ್ದು ಕುಳಿತಳು. ಫಾರ್ಮ್ ಹೌಸ್‌ನ ಅಂಗಳದಲ್ಲಿ ಯಾರೋ ಓಡಾಡುವಂತೆ ಕೇಳಿತು. ಕಿರಣನೇ ಅಂದುಕೊಂಡವಳು ಎದ್ದು ಹೊರಗೆ ಬಂದಳು. ಹೊರಗಿನ ದೀಪ ಬೆಳಗಿಸಿದಳು.

ಅಂಗಳದಲ್ಲಿ ನಿಂತು ದೀಪ ಬೆಳಗಿಸಿದ ಅವಳತ್ತವೇ ಇಬ್ಬರ ದೃಷ್ಟಿಯೂ ಇತ್ತು. ಇಬ್ಬರೂ ಅಪರಿಚಿತರು! ಮೇನಕಾ ಕಿರುಚಲು ಬಾಯ್ದೆರೆದಳು.

ಅಷ್ಟರಲ್ಲಿಯೇ ಅವರಲ್ಲೊಬ್ಬ ಅವಳ ಸಮೀಪಕ್ಕೆ ಬಂದ.

'ನಿನ್ನೆ ಹುಡುಕಿಕೊಂಡು ಬಂದಿದ್ದೇನೆ. ನನ್ನ ಪರಿಚಯವಿದೆಯಲ್ಲವೆ?' ಆತ ಬೆಳಕಿಗೆ ತನ್ನ ಮುಖವನ್ನು ಹಿಡಿಯುವಂತೆ ಬಂದು ಒಳಗೆ ಸೇರಿಕೊಂಡ. ಮೇನಕಾ ಪಕ್ಕಕ್ಕೆ ಸರಿದು ನಿಂತಳು.

ಅದೇ ಆ ದಿನ ಪಾರ್ಟಿಯಲ್ಲಿ ಕಂಡಾತ. ಕಾಶಮ್ಮನ ದೂರದ ಸಂಬಂಧಿ! ತನ್ನಿಂದ ಏನನ್ನೋ ನಿರೀಕ್ಷಿಸುತ್ತಿರುವವನು. ಲಹರಿಯ ಕಣ್ಮರೆಯ ಹಿಂದೆ ತನ್ನ ಕೈವಾಡವಿದೆಯೆಂದು ಆರೋಪಿಸಿದವನು.

ಕಾಕುಟ್ಟ!

ಹಾಗಾದರೆ ಕಿರಣನೆಲ್ಲಿ? ಆ ಕಿರುಚಾಟ, ಹೋರಾಟ, ನರಳಾಟ ಯಾರದ್ದು? ಅದೇ ದಾರಿಯಿಂದ ಬಂದ ಈ ವ್ಯಕ್ತಿಗಳಿಗೆ ಅದು ತಿಳಿಯದಿರದೆ? ಅನುಮಾನದ ನೋಟ ಅವರಿಬ್ಬರತ್ತ ಹರಿಸಿದಳು.

**(ಸಶೇಷ)**